File No.FD/316/EXP6/2020-EXP6-FINANCE DEPT.SEC

Digitally Signed

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 316 ವೆಚ್ಚ 6/2020(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:9.9.2020

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ

ರವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/
ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಎಲ್ಲಾ ತಾಲ್ಲೂಕು ಪಂಚಾಯತಿಗಳ
ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನರೇ,

ವಿಷಯ: ಬಾಕಿ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ತೀರ್ಣಗೊಳಿಸುವ ಬಗ್ಗೆ

ಉಲ್ಲೇಖ: 1. ಅಧ್ಯಕ್ಷರು, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರುರವರ ಮನವಿ ದಿನಾಂಕ:1.9.2020
2. ಅಧ್ಯಕ್ಷರು, ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ, ಬೆಂಗಳೂರುರವರ ಮನವಿ ದಿನಾಂಕ:2.9.2020

*****

ರಾಜ್ಯ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಸರ್ಕಾರಿ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಲೆಕ್ಕ ಶೀರ್ಷಿಕೆ 2515-00-196-1-05-300 ಮತ್ತು 2515-00-197-1-10-300ರಡಿ ಅನುದಾನವನ್ನು ಒದಗಿಸಲಾಗುತ್ತಿದ್ದು, ಬಾಕಿ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ತೀರ್ಣಗೊಳಿಸಲು/ತೀರ್ಣಗೊಳಿಸಲು ಅನುದಾನವನ್ನು ಬಿಡುಗಡೆಗೊಳಿಸು ವಂತೆ ಕೋರಿ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದನ್ನು ಗಮನಿಸಿದೆ ಹಾಗೂ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮೇಲಿನ ಉಲ್ಲೇಖಗಳಲ್ಲಿ ಮನವಿಯನ್ನು ಸಲ್ಲಿಸಲಾಗಿದೆ.

ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಗೊಳಿಸಲಾಗಿರುವ ಅನುದಾನಕ್ಕೆ ಇಲಾಖಾವಾರು ಗುರಿ ನಿಗಧಿಪಡಿಸಿಕೊಂಡಿರುವ ಬಗ್ಗೆ ತಿಳಿದುಬಂದಿದೆ. ಇದು ಸರಿಯಾದ ಕ್ರಮವಲ್ಲ. ಕೆಲವು ಇಲಾಖೆಗಳಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಪ್ರಸ್ತಾವನೆಗಳು ಒಂದು ಬಾರಿ ಕಡಿಮೆಯಾಗುವ/ಹೆಚ್ಚಾಗುವ ಅಥವಾ ಪ್ರಸ್ತಾವನೆಗಳು ಸ್ವೀಕೃತವಾಗದಿರುವ ಸನ್ನಿವೇಶಗಳು ಇರುತ್ತದೆ. ಆದ್ದರಿಂದ ಲಭ್ಯವಿರುವ ಅನುದಾನದಲ್ಲಿ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ನಿಯಮಾನುಸಾರ ತೀರ್ಣಗೊಳಿಸಬೇಕಾಗುತ್ತದೆ.

ಮುಂದುವರೆದು ವೈದ್ಯಕೀಯ ಶುಶ್ರೂಷೆ ಪಡೆದು 6 ತಿಂಗಳ ಒಳಗಾಗಿ ಬಿಲ್ಲನ್ನು ಕ್ಲೇಮು ಮಾಡಿದಲ್ಲಿ ಖಜಾನೆಯಲ್ಲಿ ತೀರ್ಣಗೊಳ್ಳುತ್ತದೆ. ಆದರೆ ಸ್ವೀಕೃತವಾಗಿರುವ ಅವಧಿ ಮೀರಿ ಸಲ್ಲಿಕೆಯಾಗುವ ಬಿಲ್ಲುಗಳನ್ನು ಸಲ್ಲಿಸಿ ತೀರ್ಣಗೊಳಿಸಲು ಅವಕಾಶವಿರುವುದಿಲ್ಲ. ಅವಧಿ ಮೀರಿದ ಬಿಲ್ಲುಗಳನ್ನು ಸಕ್ಷಮ ಪ್ರಾಧಿಕಾರದಿಂದ ವಿಳಂಬ ವಿನಾಯಿತಿ ಪಡೆದು ಮರು ಸಲ್ಲಿಸಬೇಕಾಗುತ್ತದೆ.

ಆದ್ದರಿಂದ **ಎಲ್ಲಾ ಜಿಲ್ಲಾ/ತಾಲೂಕು ಪಂಚಾಯತಿಗಳ ಅಧಿಕಾರಿಗಳು ಇಲಾಖಾವಾರು ಹಂಚಿಕೆಯನ್ನು ಮಾಡದೆ ಲಭ್ಯವಿರುವ ಅನುದಾನದ ಮಿತಿಯೊಳಗೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಕ್ಲುಪ್ತ ವೇಳೆಯೊಳಗೆ ತೀರ್ಣಗೊಳಿಸಿದಲ್ಲಿ ಇಂತಹ ವಿಳಂಬಕ್ಕೆ ಕಾರಣವಾಗುವುದಿಲ್ಲ. ಆರ್ಥಿಕ ಇಲಾಖೆ ಪ್ರತಿ ಕಂತಿನ ಬಿಡುಗಡೆಯಲ್ಲಿ, ವೈದ್ಯಕೀಯ ವೆಚ್ಚ ಮರುಪಾವತಿಗೆ ಅನುದಾನ ಬಿಡುಗಡ ಮಾಡುತಿದ್ದು, ಒದಗಿಸಿರುವ/ಬಿಡುಗಡೆಗೊಳಿಸಿರುವ/ ಲಭ್ಯವಿರುವ ಎಲ್ಲಾ ಅನುದಾನ ಪೂರ್ಣವಾಗಿ ವೆಚ್ಚವಾದ ನಂತರ ಆರ್ಥಿಕ ವರ್ಷದೊಳಗೆ ಅನುದಾನದ ಅಗತ್ಯವಿದ್ದಲ್ಲಿ ಮಾತ್ರ ಪ್ರಸ್ತಾವನೆ ಸಲ್ಲಿಸುವುದು. ಪ್ರಸ್ತಾವನೆ ಅಪೂರ್ಣವಾಗಿ ಸಲ್ಲಿಸದೆ, ಸೂಕ್ತ ದಾಖಲಾತಿ/ಮಾಹಿತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಮೇಲೆ ಸೂಚಿಸಿರುವಂತೆ ಪ್ರಸ್ತಾವನೆ ಸಲ್ಲಿಸಿದರೆ ಮಾತ್ರ, ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.**

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ) ಆರ್ಥಿಕ ಇಲಾಖೆರವರಿಂದ ಅನುಮೋದಿತ)

ತಮ್ಮ ನಂಬುಗೆಯ,

(ಪುರುಷೋತ್ತಮ್ ಸಿಂಗ್ ಬಿ ಹೆಚ್).
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ

ಪ್ರತಿಯನ್ನು:
1. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, 5ನೇ ಮಹಡಿ, 4ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-9ರವರಿಗೆ ಮಾಹಿತಿಗಾಗಿ
2. ಅಧ್ಯಕ್ಷರು, ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ, 4ನೇ ಮುಖ್ಯ ರಸ್ತೆ, 5ನೇ ಅಡ್ಡರಸ್ತೆ, ಸಮಾನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ ಬಡಾವಣೆ, ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆ, ಬೆಂಗಳೂರು-20ರವರಿಗೆ ಮಾಹಿತಿಗಾಗಿ

Signed by Purushotham Singh